ನಗು ಬರುತ್ತದೆ ನನಗೆ. ವಾರಸುದಾರ ಬೇಕು, ನಾವು ಸತ್ತ ನಂತರ ನಮ್ಮ ಆಸ್ತಿ ಯಾರದೋ ಪಾಲಾಗದಿರಲಿ ಎಂದು ಮಕ್ಕಳು ಬೇಕೆ? ಮೊನ್ನೆ ರವಿಯ ಹಳ್ಳಿಯ ಗೆಳೆಯ ಶಿವು ನಮ್ಮಲ್ಲಿಗೆ ಬಂದವ, 'ಅಲ್ಲೋ ರವ್ಯಾ, ಕಡೀಕ ಏನಿಲ್ಲ ಅಂದ್ರೂ ಸತ್ತಾಗ ಅಳಾಕ ಒಂದು, ಹೊರಾಕ ಒಂದು, ಎರಡ ಮಕ್ಕಳರೇs ಬೇಕಪ್ಪಾ' ಎಂದ ಮಾತಂತೂ ಜೋಕೆಂಬಂತೆ ನಗು ಉಕ್ಕಿಸಿತ್ತು.



ಮಗುವೆಂದರೆ ನನ್ನ ಆದರ್ಶಗಳ ಅಭಿವ್ಯಕ್ತಿ ಆಗಿರಬೇಕು. ಅದರ ಬೆಳವಣಿಗೆಯಲ್ಲಿ ನಾನೂ ಬೆಳೆಯುತ್ತಾs ಅದರ ಪ್ರತಿ ಯಶಸ್ಸಿನಲ್ಲೂ ಸುಖ ಅನುಭವಿಸುತ್ತಾs... ಯೋಚಿಸುತ್ತಲೇ ಮನ ಪುಳಕಗೊಳ್ಳುತ್ತದೆ ನನಗೆ. ಆದರೇಕೋ ಲಗ್ನವಾಗಿ ಹತ್ತು ವರ್ಷವಾದರೂ ಮಗುವಿನ ಭಾಗ್ಯ ದೊರೆತಿರಲಿಲ್ಲ. ಅಮ್ಮನ ಪ್ರಾರ್ಥನೆ, ಆಯುರ್ವೇದ ಗಿಡಮೂಲಿಕೆಗಳ ಕಷಾಯ, ಡಿಗ್ರಿಗಳನ್ನು ಹೊತ್ತ ಆಲೋಪತಿ ವೈದ್ಯರ ಔಷಧ ಯಾವುದಕ್ಕೂ ಪರಿಣಾಮ ಕಂಡಿರಲಿಲ್ಲ. ಕೆಲವೊಮ್ಮೆ ರವಿ ನನ್ನ ಮೂಡು ಸರಿಯಾಗಿರುವಾಗೆಲ್ಲ ಮೆಲ್ಲಗೆ ಹೇಳುತ್ತಿರುತ್ತಾನೆ: 'ನೋಡು ಸುಮಿ ನನಗೆ ನೀನೇ ಸಾಕು, ನಿನ್ನಿಂದ ಮಕ್ಕಳು ಬೇಕೇ ಬೇಕೆಂಬ ಹಟವಿಲ್ಲ. ಉತ್ತರಾಧಿಕಾರಿ ಬೇಕು ಎಂಬಂಥ ಟಾಟಾ ಬಿರ್ಲಾ ಏನೂ ನಾನಲ್ಲ. ನಾಳೆ ವೃದ್ಧಾಪ್ಯಕ್ಕೆ ಹೆತ್ತಮಕ್ಕಳು ಹೆಗಲು ಕೊಟ್ಟಾರೆಂಬ ಭರವಸೆಯೂ ನನಗಿಲ್ಲ. ಇನ್ನು, ಈ ಮನೆಯ ಅಂಗಳದಲ್ಲಿ ಆಡುತ್ತಾ ತೊದಲು ನುಡಿಗಳಿಂದ ಹಿತ ನೀಡಲು, ನಮ್ಮ ಕಣ್ಮಣಿಯಾಗಿ ಬೆಳೆಯಲು ಯಾವ ಪುಟ್ಟ ಮಗುವಾದರೂ ಸೈ ಅಲ್ಲವೆ? ನಿನ್ನದೇ ಕಾಕಾನ ಮಗಳು ಲೀಲ ನಿನ್ನ ಅತಿ ಪ್ರೀತಿಯ ತಂಗಿಯಲ್ಲವೆ? ಕುಮಾರ ಕಂಠೀರವನಾಸೆಗೆ ನಾಲ್ಕು ಹೆಣ್ಣು ಹೆತ್ತ ಧೀರೆ ಅವಳ ಮಗುವೇ ಏಕಾಗಬಾರದು...' ಎನ್ನುತ್ತಾ ಮಾತು ನಿಲ್ಲಿಸಿ ನಗಾಡಿದ್ದ. 'ಹಾಂ ವಿಷಯ ಬಂದಿದೆ ಅಂತ ಈಗಲೇ ಹೇಳಿಬಿಡ್ತೇನೆ ದತ್ತು ತಗೊಂಡರೂ ನನಗೆ ಹೆಣ್ಣುಮಗುವೇ ಬೇಕು ಮತ್ತೆ...' ಎಂದಾಗ ಕಣ್ಣಲ್ಲಿ ನೀರಾಡಿತ್ತು ನನಗೆ. ರವಿಯದ್ದು ಹಾಗೆಯೇ ಯಾವತ್ತೂ ಹೆಂಗರುಳು.

ಲೀಲಾ ನನ್ನ ಪ್ರಿಯ ತಂಗಿ, ಕೂಡು ಕುಟುಂಬದಲ್ಲಿ ಆಡಿ ಬೆಳೆದ ನಾವಿಬ್ಬರೂ ದೇಹವೆರಡೂ